

# ಚದುರಂಗದ ಜಗತ್ತಿನಲ್ಲಿ ಅರ್ಜುನ್ ದಾಪುಗಾಲು

**ಭಾರತೀಯ ಆಟಗಾರರಾದ ಪ್ರಜ್ಞಾನಂದ ಹಾಗೂ ಗುಕೇಶ್ ಸಾಧನೆ ಸುದ್ದಿಯಲ್ಲಿರುವಾಗಲೇ, ಗೆಳೆಯರಿಬ್ಬರನ್ನೂ ಅರ್ಜುನ್ ಇರಿಗೇಶಿ ರ್‍ಯಾಂಕಿಂಗ್ ಪಟ್ಟಿಯಲ್ಲಿ ಹಿಂದಿಕ್ಕಿದ್ದಾರೆ. ಫಿಡೆ ರ್‍ಯಾಂಕಿಂಗ್‌ನ ಲೈವ್ ರೇಟಿಂಗ್‌ನಲ್ಲಿ ಅವರೀಗ ನಂಬರ್ 4!**

**■ ನಾಗೇಶ ಶೆಣೈ**

ಅಜರ್‌ಬೈಜಾನ್‌ನ ಬಾಕು ನಗರದಲ್ಲಿ ಕಳೆದ ವರ್ಷ ನಡೆದ 'ವಿಶ್ವಕಪ್ ಚೆಸ್' ಫೈನಲ್ ತಲುಪಿದ ಅತಿ ಕಿರಿಯ ಆಟಗಾರ ಎಂಬ ಸಾಧನೆಯಿಂದ ಚೆನ್ನೈನ ಯುವತಾರೆ ಪ್ರಜ್ಞಾನಂದ ಎಲ್ಲೆಡೆ ಸುದ್ದಿಯಾದರು. ಈ ವರ್ಷದ ಏಪ್ರಿಲ್‌ನಲ್ಲಿ ಕೆನಡಾದಲ್ಲಿ ನಡೆದ 'ಕ್ಯಾಂಡಿಡೇಟ್ಸ್' ಟೂರ್ನಿ ಗೆದ್ದು, ವಿಶ್ವ ಚಾಂಪಿಯನ್ ಪಟ್ಟಕ್ಕೆ ಅತಿ ಕಿರಿಯ ಚಾಲೆಂಜರ್ ಎಂಬ ಹಿರಿಮೆಗೆ ಇನ್ನೊಬ್ಬ ಕಿರಿಯ ಸಾಧಕ ದೊಮ್ಮರಾಜು ಗುಕೇಶ್ ಪಾತ್ರರಾದರು. ಆದರೆ ಹೆಚ್ಚಿನ ಸದ್ದುಗದ್ದಲವಿಲ್ಲದೇ ಇತ್ತೀಚೆಗೆ ವಿಶ್ವ ರ್‍ಯಾಂಕಿಂಗ್‌ನ ಅಗ್ರ ಐದರೊಳಗೆ ಲಗ್ಗೆಯಿಟ್ಟಿದ್ದಾರೆ – ಭರವಸೆಯ ಆಟಗಾರ ಅರ್ಜುನ್ ಇರಿಗೇಶಿ.

ಮೊನ್ನೆಯಷ್ಟೇ– ಜೂನ್ 3ರಂದು– ಫಿಡೆ ರ್‍ಯಾಂಕಿಂಗ್‌ನ ಲೈವ್ ರೇಟಿಂಗ್‌ನಲ್ಲಿ ತೆಲಂಗಾಣದ ಈ ಗ್ರ್ಯಾಂಡ್‌ಮಾಸ್ಟರ್ ವಿಶ್ವದ ಅಗ್ರ ಐದರೊಳಗೆ ಸ್ಥಾನ ಪಡೆದರು. ಫ್ರಾನ್ಸ್‌ನ ಪ್ರಮುಖ 16 ಕ್ಲಬ್‌ಗಳನ್ನು ಒಳಗೊಂಡ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಅವರ ಸಾಧನೆ ಅಮೋಘ. 'ಮೆಟ್ಜ್ ಫಿಷರ್' ಕ್ಲಬ್ ಪರ ಆಡಿದ ಅವರು ಎದುರಾಳಿಗಳಾದ ಸ್ವದೇಶದ ಅನುಭವಿ ಪಿ. ಹರಿಕೃಷ್ಣ, ವಿತಾಲಿ ಕುನಿನ್ (ಜರ್ಮನಿ), ಅಲ್ವಾರ್ ರೊಸೆಲ್ (ಸ್ಪೇನ್) ಮತ್ತು ಐಎಂ ಲೊಯಿಕ್ ಟ್ರಾವಡಾನ್ ಅವರನ್ನು ಸೋಲಿಸಿದ್ದಾರೆ. ಅದರಲ್ಲೂ ಅವರು ಟ್ರಾವಡಾನ್ ಅವರನ್ನು ಸೋಲಿಸಲು ತೆಗೆದುಕೊಂಡಿದ್ದು ಬರೇ 14 ನಡೆಗಳನ್ನು!

ಈಗ ಲೈವ್ ರೇಟಿಂಗ್‌ನಲ್ಲಿ ಅರ್ಜುನ್ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್, ಅಮೆರಿಕದ ಹಿಕಾರು ನಕಾಮುರ, ಫ್ಯಾಬಿಯಾನೊ ಕರುವಾನಾ ಮತ್ತು ರಷ್ಯಾದ ಇಯಾನ್ ನಿಪೊಮ್‌ನಿಷಿ ನಂತರದ ಸ್ಥಾನದಲ್ಲಿದ್ದಾರೆ. ಪ್ರತಿಯೊಂದು ಪಂದ್ಯ ಗೆಲ್ಲಬೇಕೆಂಬ ಛಲ, ಕರಾರುವಾಕ್ ಲೆಕ್ಕಾಚಾರ, ಮಹತ್ವಾಕಾಂಕ್ಷೆಯ ಓಪನಿಂಗ್... ಇವೆಲ್ಲ ಅಂಶಗಳು ಅವರ ಆಟದಲ್ಲಿ ಮೇಳೈಸಿವೆ.

20 ವರ್ಷ ವಯಸ್ಸಿನ ಅರ್ಜುನ್ ಸದ್ಯ 2769.7 ರೇಟಿಂಗ್ ಹೊಂದಿದ್ದಾರೆ. ಜೂನ್ ಆರಂಭದಲ್ಲಿ ಪ್ರಕಟವಾದ ರ್‍ಯಾಂಕಿಂಗ್ ಪಟ್ಟಿಯಲ್ಲಿ ಅವರು ಎಂಟನೇ ಸ್ಥಾನದಲ್ಲಿದ್ದರೂ, ಈಗ ಬಡ್ತಿ